## ಮತ್ತೆ ಅನಿಲ್- ಜೂಹಿ

ಅನಿಲ್ ಕಪೂರ್‌ಗೆ ವಯಸ್ಸಾಗುವುದೇ ಇಲ್ಲ ಎನ್ನುವುದು ಬಾಲಿವುಡ್ ನ ಗಾಢ ನಂಬಿಕೆ. ಆದರೆ ಅನಿಲ್ ಕಪೂರ್ ಜತೆಗೆ ದಶಕಗಳ ಹಿಂದೆ ಜೋಡಿಯಾಗಿ ನಟಿಸಿರುವ ನಾಯಕಿಯರಿಗೆಲ್ಲ ವಯಸ್ಸಾಗಿದೆ. ಹಾಗಿದ್ದೂ ಜನರು ಈ ಹಳೆಯ ಜೋಡಿಗಳನ್ನು ಒಟ್ಟಿಗೆ ನೋಡಲು ಬಯಸುತ್ತಿರುವುದು ಕುತೂಹಲಕರ ಸಂಗತಿ.

ಅನಿಲ್ ಕಪೂರ್—ಐಶ್ವರ್ಯ ರೈ ಜೋಡಿಯಾಗಿ ನಟಿಸಿರುವ 'ಫನ್ನೆಖಾನ್' ಚಿತ್ರದ ಶೂಟಿಂಗ್ ಮುಗಿದಿದ್ದು ಬಿಡುಗಡೆಗೆ ಸಿದ್ಧತೆ ನಡೆದಿದೆ.

ಅದರ ಬೆನ್ನಲ್ಲೇ 'ಟೋಟಲ್ ಧಮಾಲ್' ಚಿತ್ರದಲ್ಲಿ ಅನಿಲ್ ಕಪೂರ್ ಮಾಧುರಿ ದೀಕ್ಷಿತ್ ಜೋಡಿ ಮೋಡಿ ಮಾಡಿರುವ ಸುದ್ದಿ ಬಂದಿದೆ.

ಇದಿಷ್ಟೇ ಆದರೆ ಪರವಾಗಿರಲಿಲ್ಲ. ಈಗ ಅನಿಲ್—ಕಪೂರ್ ಮತ್ತು ಜೂಹಿ ಚಾವ್ಲಾ ಜತೆಯಾಗಿ ನಟಿಸುತ್ತಿರುವ ಸುದ್ದಿ ಬಂದಿದೆ. 'ಏಕ್ ಲಡ್ಕೀ ಕೊ ದೇಖಾ ತೊ ಐಸಾ ಹುವಾ' ಎನ್ನುವ ಈ ಹೊಸ ಚಿತ್ರದಲ್ಲಿ ಅನಿಲ್—ಜೂಹಿ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದೂ ಸುದ್ದಿಯಾಗಿದೆ. ದಶಕಗಳ ಹಿಂದೆ ಅನಿಲ್—ಜೂಹಿ 'ಜೂಟ್ ಬೋಲೆ ಕವ್ವಾ ಕಾಟೆ' ಚಿತ್ರದಲ್ಲಿ ಪ್ರೇಕ್ಷಕರಿಗೆ ಮೋಡಿ ಮಾಡಿದ್ದನ್ನು ನೆನಪಿಸಿಕೊಂಡಿರುವ ನಿರ್ಮಾಪಕರು ಈ ಹೊಸ ಚಿತ್ರ ಸೂಪರ್‌ಹಿಟ್ ಆಗುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಕಾರಣ ಈ ಚಿತ್ರದಲ್ಲಿ ಅನಿಲ್ ಕಪೂರ್ ಮಗಳು ಸೋನಂ ಕಪೂರ್ ಕೂಡಾ ನಟಿಸುತ್ತಿರುವುದು. ಅಪ್ಪ—ಮಗಳು ಜತೆಯಾಗಿ ನಟಿಸುತ್ತಿರುವ ಮೊದಲ ಚಿತ್ರ ಇದಾಗಿರುವುದರಿಂದ ಪ್ರೇಕ್ಷಕರಲ್ಲಿ ಭಾರೀ ಕುತೂಹಲ ಮೂಡಿಸಿದೆ.

■ ಬಿಂದು





## ಐಶ್ವರ್ಯಳ ಮಗ!

ಐಶ್ವರ್ಯ ರೈ , ಅಭಿಷೇಕ್ ಬಚ್ಚನ್‌ನನ್ನು ಮದುವೆಯಾಗಿ ಆರಾಧ್ಯ ಎಂಬ ಮಗುವನ್ನು ಹೆತ್ತಿರುವುದು ಎಲ್ಲರಿಗೂ ಗೊತ್ತಿರುವ ಸುದ್ದಿ. ಆದರೆ ಹೈದರಾಬಾದ್‌ನಲ್ಲಿ ಇನ್ನೊಬ್ಬ ತಾನು ಐಶ್ವರ್ಯ ರೈ ಮಗ ಎಂದು ಸುದ್ದಿ ಮಾಡಿ ಪೊಲೀಸರ ಅತಿಥಿ ಆಗಿರುವುದು ಎಲ್ಲರ ಹುಬ್ಬೇರಿಸಿದೆ. ಆದಿ ರೆಡ್ಡಿ ಸಂದೀಪ್ ಕುಮಾರ್ ಎಂಬ ಈ ಯುವಕ 'ನಾನು ಐಶ್ವರ್ಯ ರೈ ಮಗ. 1988ರಲ್ಲಿ ಐವಿಎಫ್ ಮೂಲಕ ಐಶ್ವರ್ಯ ರೈ ಮಗುವಾಗಿ ಹುಟ್ಟಿದವನು' ಎಂದು ಹೇಳಿದ್ದೇ ಮಾಧ್ಯಮಗಳು ಹಿಂದೆ ಮುಂದೆ ನೋಡದೆ ಸುದ್ದಿ ಮಾಡಿವೆ. ಈತನ ವಿರುದ್ಧ ಕೊನೆಗೂ ಐಶ್ವರ್ಯ ರೈ ಪೊಲೀಸರಿಗೆ ದೂರು ನೀಡಿದ್ದಾರೆ.

ತಮಾಷೆಯ ಸಂಗತಿಯೆಂದರೆ ಈತ ಈ ಹಿಂದೆ 'ನಾನು ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಮಗ' ಎಂದೂ ಬಹಿರಂಗವಾಗಿ ಘೋಷಿಸಿದ್ದ! ಈತನನ್ನು ಬಲ್ಲವರ ಪ್ರಕಾರ, ಈತ ಒಬ್ಬ ಬಸ್ ಕಂಡೆಕ್ಟರ್ ಮಗ. ಗ್ರ್ಯಾಂಡಿಯೊಸಿಟಿ ಎಂಬ ಮಾನಸಿಕ ರೋಗದಿಂದ ಈತ ಬಳಲುತ್ತಿದ್ದಾನೆ ಎಂಬ ಸುದ್ದಿಯೂ ಇದೆ. ಸದ್ಯ ರಜನಿಕಾಂತ್ ಮಗ ಎಂದು ಇದುವರೆಗೆ ಹೇಳಿಲ್ಲವಲ್ಲ.. ಎಂದು ರಜನಿ ಅಭಿಮಾನಿಗಳು ನಿಟ್ಟುಸಿರು ಬಿಟ್ಟಿರಬಹುದೆ?